ಅದು ಪ್ರಾತಃವಿಧಿಗಾಗಿ ಶ್ವೇತಭವನದ ಹೊರಗೆ ಬಂದು ಅಧ್ಯಕ್ಷರ ಗಾರ್ಡನಿನ ಹುಲ್ಲು ಹಾಸಿನ ತೇವದಲ್ಲಿ ಗುಂಡಿ ತೋಡುತ್ತಿತ್ತೋ?... ತೋಡಿದ ಗುಂಡಿಯನ್ನು ತನ್ನ ಮೃದು ಪಾದದಿಂದ ತಾನೇ ಮುಚ್ಚುತ್ತಿತ್ತೋ?... ಮಣ್ಣನ್ನು ಮುಚ್ಚಿದ ಕೈಗಳನ್ನು ತಾನೇ ನಕ್ಕಿ ಸ್ವಚ್ಛಗೊಳಿಸುತ್ತಿತ್ತೋ... ಅಥವಾ ಅದರ ಕೆಲಸ ಮುಗಿದ ಕೂಡಲೆ ಸೇವಕರು ಬಂದು ಗುಂಡಿ ಮುಚ್ಚಿ, ಕೈ ಸ್ವಚ್ಛಗೊಳಿಸುತ್ತಿದ್ದರೋ... ಅಥವಾ ಶ್ವೇತಭವನದೊಳಗೆಯೇ ಒಂದು ಅಗಲವಾದ ತೊಟ್ಟಿಯಲ್ಲಿ ಮರಳು ತುಂಬಿಸಿ ಅಲ್ಲೇ ಬದಿಯಲ್ಲಿ ಟಿಷ್ಯೂ ಪೇಪರಿನ ವ್ಯವಸ್ಥೆ ಮಾಡಲಾಗಿತ್ತೋ... ಹಾಗಿದ್ದರೆ ಇಂಡಿಯಾ ತನ್ನುಗುರನ್ನು ಎಲ್ಲಿ ಹರಿತ ಮಾಡುತ್ತಿದ್ದಳು?... ಈ ಬಿಳಿಭವನದ ರಾಯಲ್ ಬೆಕ್ಕಿಗೆ ಉಗುರು ಹರಿತದ ಅನಿವಾರ್ಯತೆ ಇದೆಯೇ?... ಇತ್ಯಾದಿ ಇತ್ಯಾದಿ. ಆ ಬಿಳಿಭವನದೊಳಗಿನ ಈ ಸಣ್ ಸಣ್ ಸಂಗ್ತಿಗಳೆಲ್ಲ ನಮ್ಗೆ ಹ್ಯಾಂಗ್ ಗೊತ್ತಾಗ್‌ಬೇಕು? ಒಟ್ಟಿನಲ್ಲಿ ಎಲ್ಲಿಯೋ ಒಂದು ಕಡೆ ವಿಸರ್ಜನೆ ಮಾಡುತ್ತಿತ್ತು ಎಂಬುವುದಂತೂ ಸತ್ಯ. ಇಂಡಿಯಾದಲ್ಲಿ ಕೆಲವರು ತಮ್ಮ ಮನೆಗೆ ಕೆಟ್ಟ ಕಣ್ಣಿನ ಕೆಟ್ಟ ದೃಷ್ಟಿ ಬೀಳದಿರಲಿ ಎಂದು ಕಪ್ಪು ಬೆಕ್ಕು ಸಾಕುವುದನ್ನು ನೋಡಿಯೇ ಇದ್ದೇವೆ. ಆದರೂ ಪಶ್ಚಿಮದಲ್ಲಿ ಈ ಕರಿಬೆಕ್ಕುಗಳು ಮಾಟಗಾತಿಯರ ಜೊತೆಯಲ್ಲಿ ಇರುವುದು ಗೊತ್ತಿದ್ದವರಿಗೆ, ಇಡೀ ಜಗತ್ತೇ ಗಮನಿಸುವ ಅಚ್ಚಬಿಳಿಯ ಶ್ವೇತಭವನದಲ್ಲಿ ಕರಿಕರಿ ಹೆಣ್ಣು ಬೆಕ್ಕು... ಇದು ಯಾಕೋ ಒಂದಕ್ಕೊಂದು ಹೊಂದುವುದಿಲ್ಲ ಎಂದು ಅನ್ನಿಸಿಯೇ ಅನ್ನಿಸುತ್ತದೆ. ಇರಲಿ, ದೊಡ್ಡವರ ವಿಷಯ ನಮಗ್ಯಾಕೆ?

ಈಗೆಲ್ಲ ಈ ಬೆಕ್ಕುಗಳ ಕಿವಿಯ ಗುಗ್ಗೆ, ಮೂಗಿನ ಬಾಂಪೇಲು, ಬೆರಳುಗಳ ನಡುವಿನ ಮಣ್ಣು ತೆಗೆಯಲು ಬಡ್‌ಗಳು, ಮಲಗಲು ಹಾಸಿಗೆ, ಮಲಮೂತ್ರಕ್ಕೆ ಅದೇನೋ ಥರ್ಮೋಬಾಲ್ಸ್ ಎಲ್ಲಾ ಸಿಗುತ್ತವಂತೆ. ನಮ್ಮ ಸಂಗನ ಹಾಗೆ ರಫ್ ಅಂಡ್ ಟಫ್ ಇರುವವರಿಗೆ, ಸದಾ ದೂಳಿನಲ್ಲಿ

